ಶ್ರೀ ಇ. ಮಾರುತಿರಾವ್ ಪವಾರ್ : ತಾವು ಕೊಟ್ಟಿರುವ ಉತ್ತರದ ಪ್ರಕಾರವೇ 27 ಬಡಾವಣೆಗಳ ಪೈಕಿ ರೆವಿನ್ಯೂ ನಿವೇಶನಗಳೇ 24 ಬಡಾವಣೆಗಳಲ್ಲಿದ್ದ. ಈಗಾಗಲೇ ಇಂಥ ಬಡಾವಣೆಗಳಲ್ಲಿ ವಿದ್ಯುತ್‌ನ್ನು ಕಿತ್ತು ಹಾಕುತ್ತಿದ್ದಾರೆ. ಬಡವರು, ಕೂಲಿ ಮಾಡತಕ್ಕವರು, ಹರಿಜನರು, ಗಿರಿಜನರು ವಾಸ ಮಾಡತಕ್ಕ ಇಂಥ ಏರಿಯಾಗಳಲ್ಲಿ ವಿದ್ಯುತ್‌ನ್ನು ಕೊಡದಿದ್ದರೆ ಅವರುಗಳು ಯಾವ ರೀತಿಯಲ್ಲಿ ಜೀವನ ಮಾಡುತ್ತಾರೆ? ಬಹಳ ಹಿಂಸೆಯಾಗುತ್ತದೆ. ಇಂಥ ಏರಿಯಾಗಳಲ್ಲಿ ವಿದ್ಯುಚ್ಛಕ್ತಿ ನಿಲ್ಲಿಸದೆ ಇರುವ ರೀತಿ ಮಾನ್ಯ ಉಪಮುಖ್ಯಮಂತ್ರಿಯವರು ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಇದೆಲ್ಲದಕ್ಕೂ ಅವರೇನು ಮಾಡುತ್ತಾರೆ? ಮೂರ್ವಿ ಪ್ರಶ್ನೆ ಶ್ರೀ ಬಿ.ಬಿ. ಶಿವಪ್ಪನವರು.

ಸಕಲೇಶಪುರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಸ್ಥಾಪನೆ

547 - ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಮತ್ತು ಆಲೂರಿನಲ್ಲಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಸ್ಥಾಪಿಸುವ ಪ್ರಸ್ತಾಪವು ಸರ್ಕಾರವು ಮುಂದಿದೆಯೇ;

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಾಪಿಸಲಾಗುವುದು.

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರ ಇಲ್ಲವೆಂದು ಮತ್ತೊಂದಕ್ಕೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ನಾನು ಸಕಲೇಶಪುರ ಅಥವಾ ಆಲೂರಿನಲ್ಲಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಸ್ಥಾಪಿಸುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ ಎಂದು ಪ್ರಶ್ನೆ ಕೇಳಿದ್ದೇನೆ. ಈ ರೀತಿ ಪ್ರಶ್ನೆಯನ್ನು ಕೇಳಲು ಕಾರಣಗಳಿದೆ, ಅದೇನೆಂದರೆ ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಮಾತ್ರ ಇಂಥ ನ್ಯಾಯಾಲಯವಿರುವುದರಿಂದ ತೀರ್ಪನ್ನು ಕೊಡುವುದರಲ್ಲಿ ಬಹಳ ತಡವಾಗುತ್ತಿದೆ. ಮತ್ತು ಪ್ರತಿನಿತ್ಯ ಮೊಕದ್ದಮೆಗಳ ಸಂಖ್ಯೆ ಏರಿಕೊಂಡು ಹೋಗುತ್ತಿರುವುದರಿಂದ ಅದರ ಸಂಖ್ಯೆ ಕಡಿಮೆಯಾಗುತ್ತಿಲ್ಲ, ಆದುದರಿಂದ ಸರ್ಕಾರದ ಇದರ ಬಗ್ಗೆ ಯೋಚನೆ ಮಾಡಿ ಈ ಜಾಗದಲ್ಲಿ ವಿಚಾರಣೆ ಮಾಡಲು ಬದಲೀ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) (ಕಾನೂನು ಸಚಿವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರದಲ್ಲಿ ಇರತಕ್ಕ ಆಲೂರು ಮತ್ತು ಸಕಲೇಶರಪುರಕ್ಕೆ ಸತ್ರ ನ್ಯಾಯಾಲಯಗಳನ್ನು ತೆರೆಯಬೇಕೆಂದು ಕೇಳುವುದು ಅವರ ಆಸೆಯಾಗಿದ್ದರೂ ಇದರ ಬಗ್ಗೆ ಸರ್ವ ಶ್ರೇಷ್ಠ ನ್ಯಾಯಾಲಯ ತನ್ನ ನಿರ್ಣಯವನ್ನು ಮಾಡಬೇಕಾಗುತ್ತದೆ. ಸರ್ವಶ್ರೇಷ್ಠ ನ್ಯಾಯಾಲಯ ತನ್ನ ನಿರ್ಣಯವನ್ನು ಮಾಡಬೇಕಾಗುತ್ತದೆ. ಸರ್ವಶ್ರೇಷ್ಠ ನ್ಯಾಯಾಲಯ ಸಂಪೂರ್ಣವಾದ ಪೀಠ ಕುಳಿತುಕೊಂಡು ಸದರಿ ಸ್ಥಳದಲ್ಲಿ ನ್ಯಾಯಾಲಯದ ಅಗತ್ಯವಿದೆಯೇ, ಎಷ್ಟು ಮೊಕದ್ದಮೆಗಳು ಅಲ್ಲಿ ಬರುತ್ತವೆ ಎಂಬ ಬಗ್ಗೆ ಮತ್ತು ಆಯವ್ಯಯದಲ್ಲಿ ಹಣವೆಷ್ಟು ಲಭ್ಯತೆ ಇದೆ ಮುಂತಾದ ಎಲ್ಲಾ

ವಿಚರಗಳನ್ನು ಸಮಾಲೋಚನೆ ಮಾಡಿ ಮಾಡುತ್ತಾರೆ. ಮತ್ತು ಇಲ್ಲಿಯವರೆಗೆ ಜಿಲ್ಲಾ ಕೇಂದ್ರಗಳಲ್ಲಿ ಮಾತ್ರ ಸತ್ರ ನ್ಯಾಯಾಲಯಗಳು ಸ್ಥಾಪನೆಯಾಗಿದೆಯೇ ಹೊರತು ತಾಲ್ಲೂಕು ಮಟ್ಟಗಳಲ್ಲಿ ಸ್ಥಾಪನೆಯಾಗಿಲ್ಲ, ಆದ್ದರಿಂದ ಆ ಪ್ರಶ್ನೆ ಉದ್ಭವವಾಗುವುದಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿನ ಫ್ಲೋರೈಡನ್ನು ತಡೆಗಟ್ಟಲು ಸರ್ಕಾರದ ಕ್ರಮ

613 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಪ್ರದೇಶದಲ್ಲಿನ ಕುಡಿಯುವ ನೀರಿನಲ್ಲಿರುವ ಫ್ಲೋರೈಡ್ ನಿವಾರಣೆಗೆ ತೆಗೆದುಕೊಂಡಿರುವ ಕ್ರಮಗಳೇನು?

ಆ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಬೇರೆ ಎಲ್ಲಾ ಕಡೆಗಿಂತ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) (ಅ)

ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ನಿಯೋಗದಡಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜಲಮೂಲಗಳ ರಾಸಾಯನಿಕ ಗುಣಮಟ್ಟ ಪ್ರದೇಶದಲ್ಲಿನ ಜಲಮೂಲಗಳ ರಾಸಾಯನಿಕ ಗುಣಮಟ್ಟ ಸಮೀಕ್ಷೆಯೆನ್ನು ನಡೆಸಲಾಗುತ್ತಿದೆ.

(ಆ) ಸಮೀಕ್ಷೆಯಲ್ಲಿ 1.5 ಎಂ.ಜಿ:ಎಲ್‌ಗಿಂತ ಹೆಚ್ಚಿಗೆ ಫ್ಲೋರೈಡ್ ಅಂಶವಿರುವ ಜಲಮೂಲಗಳನ್ನು ಗುರುತಿಸಿದ ಮೇಲೆ ಜಿಲ್ಲಾ ವೈದ್ಯಾಧಿಕಾರಿಗಳಿಂದ ಫ್ಲೋರೊಸಿನ್ ಕಾಯಿಲೆ ಬಗ್ಗೆ ಆರೋಗ್ಯ ಸಮೀಕ್ಷೆ ನಡೆಸಲಾಗುತ್ತದೆ (ಇ) ಎಲ್ಲಿ ನೀರಿನಲ್ಲಿ 'ಫ್ಲೋರೈಡ್ ಅಂಶ 1.5 ಎಂ.ಜಿ:ಎಲ್‌ಗಿಂತ ಜಾಸ್ತಿ ಇರುವುದು ದೃಢಪಟ್ಟಲ್ಲಿ, ಅಲ್ಲಿ ವಿವರವಾದ ಯೋಜನೆಗಳನ್ನು ತಯಾರಿಸಿ ಕುಡಿಯುವ ನೀರಿನ ಗುಣಮಟ್ಟವನ್ನು ಸುಧಾರಿಸುವ ಕೆಲಸಗಳಿಗೆ ಅಂದಾಜು ಸಲ್ಲಿಸಲು ಜಿಲ್ಲಾಪಂಚಾಯತ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಸಮೀಕ್ಷಣೆ ನಡೆಯುತ್ತಿದ್ದು ಈಗಾಗಲೇ ತಾಲ್ಲೂಕಿನಲ್ಲಿ ಒಟ್ಟು 154 ಕುಡಿಯುವ ನೀರಿನ ಸ್ಯಾಂಪಲ್‌ಗಳ ಗುಣಮಟ್ಟವನ್ನು ಪರೀಕ್ಷಿಸಲಾಗಿದೆ. ಇವುಗಳ ಪೈಕಿ ಒಟ್ಟು 135 ಸ್ಯಾಂಪಲ್‌ಗಳಲ್ಲಿ ಫ್ಲೋರೈಡ್ ಅಂಶ ನಿಗದಿಪಡಿಸಿರುವ ಮಟ್ಟಕ್ಕಿಂತ ಹೆಚ್ಚಾಗಿದೆಯೆಂದು ತಿಳಿದುಬಂದಿದೆ. ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳಿಂದ ಫ್ಲೋರೊಸಿನ್ ಕಾಯಿಲೆಯ ಆರೋಗ್ಯ ಸಮೀಕ್ಷೆ ನಡೆಸಿ 307 ಹಳ್ಳಿಗಳಲ್ಲಿ ಫ್ಲೋರೋಸಿನ್ ಕಾಯಿಲೆ ಇರುವುದೆಂದು ತಿಳಿದುಬಂದಿದೆ.

ಈಗಾಗಲೇ ಬಾಗೇಪಲ್ಲಿ ತಾಲ್ಲೂಕಿನ 6 ಫ್ಲೋರೈಡ್ ಪೀಡಿತ ಗ್ರಾಮಗಳಲ್ಲಿ ಕೊಳವೆನೀರು ಸರಬರಾಜು ಯೋಜನಾ ಅಭಿವೃದ್ಧಿ ಕಾಮಗಾರಿಯ ಹಾಗೂ ಫ್ಲೋರೈಡ್ ಪೀಡಿತ ತೋಳಪಲ್ಲಿ ಹರಿಜನ ಕಾಲೋನಿಗೆ ಕೆರುನೀರು ಸರಬರಾಜು ಯೋಜನೆಯ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಮತ್ತು ಈ 6 ಗ್ರಾಮಗಳಿಗೆ ಪ್ರತಿ ಮನೆಗೂ ಒಂದರಂತೆ ಗೃಹಬಳಕೆ ಡಿಫ್ಲೋರೈಡೇಷನ್ ಕಿಟ್ ವಿತರಣೆ ಮಾಡಲು ಸಮೀಕ್ಷೆ ನಡೆಸಲಾಗುತ್ತಿದೆ. ಇದು ಅಲ್ಲದೆ ನಲ್ಲಚೆರವು ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಡಿಫ್ಲೋರೈಡೇಷನ್ ಘಟಕವನ್ನು ಅಳವಡಿಸಿ ಶುದ್ಧ ನೀರು ಸರಬರಾಜು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ರೀತಿ ಹಂತ ಹಂತವಾಗಿ ಫ್ಲೋರೈಡ್ ಪೀಡಿತ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಕ್ರಮ